ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ವಿಧೇಯಕಕ್ಕೆ ಅನುಮೋದನೆ ದೊರೆಯಿತು

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ,2014

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಸತೀಶ್ ಜಾರಕಿಹೊಳಿ, ಅಬಕಾರಿ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, 2014 ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು :– ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. 2014ನೇ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ'

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು"ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

(ಪ್ರಸ್ತಾವ ಮಂಡಿಸಲಾಯಿತು)

ಅಧ್ಯಕ್ಷರು :–ಮಾನ್ಯ ಸಚಿವರೆ, ವಿಧೇಯಕಕ್ಕೆ ತಿದ್ದುಪಡಿ ತಂದಿರುವ ಬಗ್ಗೆ explain ಮಾಡಿ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಸತೀಶ ಜಾರಕಿಹೋಳಿ ಅಬಕಾರಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಯಾವ ಉದ್ದೇಶಕ್ಕೋಸ್ಕರ ಈ ವಿಧೇಯಕಕ್ಕೆ ತಿದ್ದುಪಡಿ ತಂದಿದ್ದೇವೆಂದರೆ, ಲೈಸೆನ್ಸ್ ಫೀಸ್ ಎಂದು ಅಬಕಾರಿ ಸುಂಕ, ಹೆಚ್ಚುವರಿ ಶುಲ್ಕ, ಹೀಗೆ ಎಲ್ಲ ರೀತಿಯ ಫೀಸ್‌ಗಳನ್ನು ಕೂಡ electronic – remittance ಮೂಲಕ ಮಾಡಬೇಕು ಎನ್ನುವುದೇ ಆಗಿದೆ. ಈ ಬದಲಾವಣೆ ಮಾಡುವುದಕ್ಕಾಗಿ ಈ ತಿದುಪಡಿಯನ್ನು ತಂದಿರುವುದು ಆದುದರಿಂದ ಇದು very simple clarification ಆಗಿದೆ.

ಅಧ್ಯಕ್ಷರು :– ಇದಕ್ಕೆ ಸಂಬಂಧಪಟ್ಟ ಇಲಾಖೆಯ ಸಚಿವರು ಸದನಕ್ಕೆ ಬರುವುದಕ್ಕೆ ಏನು ತೊಂದರೆಯಾಗಿದೆ.

ಶ್ರೀ ಉಮೇಶ್ ವಿ.ಕತ್ತಿ :– ಮಾನ್ಯ ಅಧ್ಯಕ್ಷರೆ, ಇನ್ನು ಆದಿಲ್ ಶಾಹ ಕಾಲದ್ದೇ follow ಮಾಡುತ್ತಿರುವ ಕೆಲವೊಂದನ್ನು ತಿದ್ದುಪಡಿ ಮಾಡಬೇಕಾಗಿದೆ. ಅಲ್ಲಿಂದ ಬರೆದು ಅದು ಪೋಸ್ಟನಲ್ಲಿ ಬಂದು, ಹೀಗೆ sanction ಕೊಡುವುದಕ್ಕೆ 15 ದಿನಗಳು ಆಗುತ್ತದೆ. ಆದುದರಿಂದ ಅದನ್ನೂ ಕೂಡ online ಮಾಡುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಈಗ ಎಕ್ಸೈಸ್‌ನಲ್ಲಿ ಒಂದು ಹತ್ತು ಲೀಟರ್ ಸ್ಪಿರಿಟ್ ಬೇಕೆಂದರೆ ಅಲ್ಲಿಂದ ರೆಕಮಂಡೇಶನ್ ಬಂದು ಅದು ಸ್ಯಾಂಕ್ಷನ್ ಆಗಬೇಕಾದರೆ 15 ದಿನಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಅಧ್ಯಕ್ಷರು :– ಏಕೆಂದರೆ ಕೆಲವರು ಕಂಪ್ಯೂಟರ್‌ನಲ್ಲಿ ಮಾಡಿಕೊಂಡು ಕುಳಿತಿದ್ದಾರಲ್ಲ.

ಶ್ರೀ ಉಮೇಶ್ ವಿ.ಕತ್ತಿ :– ಅದೇ ಸಾರ್, ಕಂಪ್ಯೂಟರ್‌ನಲ್ಲಿ, ಆದಿಲ್ ಶಾಹ ಕಾಲದ ಕೆಲವು ಲೆಕ್ಕಪತ್ರಗಳು ಸಿಗುವುದಿಲ್ಲ. ಆದುದರಿಂದ sanction ಮಾಡುವುದನ್ನು ಕೂಡ online ಮಾಡಿ. ದುಡ್ಡುಅಷ್ಟೇ ಅಲ್ಲ ಎರಡನ್ನೂ ಕೂಡ online ಮಾಡಿ.

ಶ್ರೀ ಟಿ.ಬಿ.ಜಯಚಂದ್ರ :– ಇನ್ನು ಮೇಲೆ ಯಾವುದೇ ರೀತಿಯ ಹಣವನ್ನು ಕಟ್ಟುವುದನ್ನು electronic remittance ಮೂಲಕ ಕಟ್ಟಲು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಜಗದೀಶ್ ಕುಮಾರ್ : – ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಅಬಕಾರಿ ಕಾಯಿದೆಗೆ ತಿದ್ದುಪಡಿ ತಂದಿರುವಂಥ ಸಂದರ್ಭದಲ್ಲಿ ಲೈಸೆನ್ಸ್ ಫೀಸ್, excise duty, additional excise duty ಯನ್ನು online ನಲ್ಲಿ direct ಆಗಿ remittance ಮಾಡುವುದಕ್ಕೆ ಒಂದು provision ಮಾಡಲಾಗುತ್ತಿದೆ ಈ ಲೈಸೆನ್ಸ್ ಫೀಸ್‌ನ್ನು ಮಾಡುವಂಥ ಸಂದರ್ಭದಲ್ಲಿ ಅವರು remittance ಪ್ರತಿಯೊಬ್ಬ ಲೈಸೆನ್ಸಿ ಹೋಗಿ ಆ ಇನ್ಸ್‌ಪೆಕ್ಟರ್ ಹತ್ತಿರ ಸಹಿಯನ್ನು ಹಾಕಿಸಬೇಕು ಮಂತ್ರಿಗಳೆ, ಅಲ್ಲೇ ಸ್ಟಾರ್ಟ್ ಆಗುವುದು ವ್ಯವಹಾರ, ಮಾನ್ಯ ಮಂತ್ರಿಗಳೆ, ಈ ಲೈಸೆನ್ಸ್ ಸರಿ ಇರುವಂಥ ಸಂದರ್ಭದಲ್ಲಿ ಅವರ ಮೇಲೆ ಯಾವುದೇ ಮೊಕದ್ದಮೆ ಇಲ್ಲದೇ ಇದ್ದರೆ, automatic renewal route ಆಗಬೇಕಾದರೆ ಅವರು ಹಣವನ್ನು ಕಟ್ಟಬೇಕು, automatic ಆಗಿ ಈ ಕಡೆ renewal ಆಗಬೇಕು. ಆದರೆ ಈಗ ಅದು ಆ ರೀತಿಯಾಗುತ್ತಿಲ್ಲ. ಈಗೇನಾಗುತ್ತಿದೆ ಯೆಂದರೆ, ಕೇವಲ remittance ಗೆ ಮಾತ್ರ ಇವರು electronic mode ಮಾಡುತ್ತಾರೆ. ಮತ್ತೆ ಲೈಸೆನ್ಸ್ issue ಮಾಡುವಾಗ excise DC ಗೆ ಲೈಸನ್ಸ್ issue ಮಾಡುವುದಕ್ಕೆ ಪವರ್ ಇಲ್ಲ. ಅವರು ತೆಗೆದುಕೊಂಡು ಹೋಗಿ Revenue DC ಹತ್ತಿರ ಇಟ್ಟುಕೊಳ್ಳಬೇಕು. ತಮ್ಮ ಗಮನಕ್ಕೆ ಈ ವಿಷಯ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ತಾವು ದಯವಿಟ್ಟು ಅಬಕಾರಿ ಇಲಾಖೆಯಲ್ಲಿ ಈ ಬಗ್ಗೆ ವಿಚಾರಿಸಬೇಕು. ಈ Revenue DC ಏನು ಮಾಡುತ್ತಾರೆಂದರೆ 30ನೇ ತಾರೀಖಿನವರೆಗೂ ಅದನ್ನು ಹಾಗೆಯೇ pending ಇಟ್ಟುಕೊಳ್ಳುತ್ತಾರೆ. Last minute ನಲ್ಲಿ renew ಮಾಡಿಕೊಡುತ್ತಾರೆ. ಆ ರೀತಿಯ practical problem ಅಲ್ಲಿದೆ. ಅದಕ್ಕಾಗಿ ನನ್ನ ಸಲಹೆಯೇನೆಂದರೆ ಈ ರೀತಿ ನಿಮ್ಮ remittance ಯಾವ ರೀತಿಯಲ್ಲಿ ಬರುತ್ತದೆಯೋ ಅದೇ ರೀತಿ ಅವರದ್ದು ಯಾವುದೇ ಕೇಸ್‌ಗಳಿಲ್ಲದೇ ಇದ್ದರೆ, ಅವರ ಮೇಲೆ ಮೊಕದ್ದಮೆ

ಗಳು ಇಲ್ಲದಿದ್ದರೆ automatic renewal ಆಗಿಬಿಟ್ಟರೆ ಅರ್ಧ ಪ್ರಾಬ್ಲಮ್ ಲೈಸೆನ್ಸೀಗಳಿಗೆ ಕಡಿಮೆಯಾಗುತ್ತದೆ. ಅದನ್ನೂ ಕೂಡ ಇದರಲ್ಲಿ ಅಳವಡಿಸುವುದಕ್ಕೆ ಸಾಧ್ಯವಿದ್ದರೆ ನೋಡಿ, ಅದೇನು ತುಂಬಾ ಲೈಸೆನ್ಸ್‌ಗಳಿಲ್ಲ ಮಂತ್ರಿಗಳೆ, ಎಲ್ಲಾ ಸೇರಿ 7 ರಿಂದ 8 ಸಾವಿರ ಲೈಸನ್ಸಗಳಿರಬಹುದು. ಎಲ್ಲಾ ಸೇರಿ ಅಂದರೆ CL 1 ನಿಂದ CL 9 ರ ತನಕ 7 ರಿಂದ 8 ಸಾವಿರ ಲೈಸನ್ಸ ಗಳಿರಬಹುದು. ಅದನ್ನು ಮಾಡಬೇಕು. ಈ ರೀತಿ online ಮಾಡಿದರೆ ಬಹಳ ಸುಲಭವಾಗುತ್ತದೆ. ಮತ್ತು mechanism ಕೂಡ ಸುಲಭವಾಗುತ್ತದೆ. ಇದರ ಜೊತೆಯಲ್ಲಿ ಈ ಅಧಿಕಾರಿಗಳ ಬಳಿ ಬಂದು ಓಡಾಡುವಂಥ ಕಷ್ಟ ಸ್ವಲ್ಪ ತಪ್ಪುತ್ತದೆ. ಇದರ ಬಗ್ಗೆ ಏನಾದರೂ ಮಾಡುವುದಕ್ಕೆ ತಮ್ಮ ಆಲೋಚನೆಯಿದೆಯೇ ಎಂದು ನಾನು ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ.

ಅದರ ಜೊತೆಯಲ್ಲಿ ಒಂದೇ ಒಂದು ವಿಚಾರ ಹೇಳುತ್ತೇನೆ, ಈ ಸದನದಲ್ಲಿ ಸಾಕಷ್ಟು ಬಾರಿ ಚರ್ಚೆಯಾಗಿದೆ. Excise laws ಬಗ್ಗೆ ಇಷ್ಟು ದಪ್ಪದ ಪುಸ್ತಕ ಇದೆ. ಅದರಲ್ಲಿ ಈಗ ಟಾಡಿ, ಜರ್ಸಾಕ್ ಹೊರಟು ಹೋಯಿತು. Psychotropic substances ಗೆ Excise Department ನಲ್ಲಿ control ಇದ್ದರೆ ಹೊಸ ಹೊಸ drugs ಬಂದಿದೆ. ಅದರ ಮೇಲೆ ಯಾವ ರೀತಿ control ಇದೆ? ಏಕೆಂದರೆ ನಮ್ಮಲ್ಲಿ ಅನೇಕ ಬಾರಿ ಜರ್ಸಾಕ್ ಅಥವಾ ಇನ್ನಾವುದೇ ದುರಂತಗಳಾದಂಥ ಸಂದರ್ಭದಲ್ಲಿ ನಮಗೆ control ಇಲ್ಲದಿರುವಂತಹ substance ಸೇರಿಸಿ ಮಾರಿದರೂ ಸಹ ನಾವು ಆ ಅಧಿಕಾರಿಗಳ ಮೇಲೆ action ತೆಗೆದುಕೊಳ್ಳುವಂತಹ ಪರಿಸ್ಥಿತಿ ಬಂದುಬಿಡುತ್ತದೆ. ಅದಕ್ಕಾಗಿ ಅದನ್ನು ಸೇರಿಸಿ, ನಮ್ಮ ಅಬಕಾರಿ ಇಲಾಖೆಯ Control ಗೆ ಬರುವ ಹಾಗೆ ಏನಾದರೂ ಮಾಡುವುದಕ್ಕೆ ಸಾಧ್ಯವಿದೆಯೇ? ಈ remittance ಜೊತೆಗೆ reciprocal ಆಗಿ permission ಸಹ ಹಾಗೆ ಹೋಗುವುದಕ್ಕೆ ಸಾಧ್ಯವಿದೆಯೇ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಬೆಳಕು ಚೆಲ್ಲಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಇದು ತಂದಿರುವಂತಹ ಬದಲಾವಣೆ cash handling ಬದಲು electronic remittance ಅಷ್ಟೆ ಅವರು

ಹೇಳಿರುವುದರಲ್ಲಿ ಕೆಲವು ವಾಸ್ತವಿಕವಾದಂತಹ ವಿಚಾರಗಳಿವೆ. Electronic remittance ಆದಾಗ ಅಷ್ಟೇ ವೇಗದಲ್ಲಿ license ಕೂಡ ಕಿರುಕುಳವಿಲ್ಲದೆ issue ಆಗಬೇಕು ಎಂದು ಇದೆ. It is the beginning . ಇದೊಂದು ಪ್ರಾರಂಭ. ಈಗ ಯಾವ ರೀತಿಯಾಗಿ tracking ಮಾಡುವುದಕ್ಕೆ easy ಮಾಡುವುದಕ್ಕೆ ಮತ್ತು simplification ಮಾಡುವುದಕ್ಕೆ ಸಾಧ್ಯವಾಗುತ್ತದೆ, ಆದರ ಬಗ್ಗೆ ದೀರ್ಘವಾಗಿ ಚರ್ಚೆ ನಡೆಯುತ್ತಿದೆ. ಇದರ ಬಗ್ಗೆ ಅವರು ಕೊಟ್ಟಂತಹ ಎಲ್ಲಾ ವಿಚಾರಗಳ ಬಗ್ಗೆ ನಾವು ಪರಿಶೀಲನೆ ಮಾಡಿದ್ದೇವೆ. ಅದನ್ನು ಕಿರುಕುಳ ಇಲ್ಲದಿರುವಂತಹ ರೀತಿಯಲ್ಲಿ ಮಾಡಬೇಕೆನ್ನುವುದೇ ಸರ್ಕಾರದ ಉದ್ದೇಶವಾಗಿದೆ, ನಾವು ಆ ದಿಸೆಯಲ್ಲಿದ್ದೇವೆ, ನೀವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ನಾವು ಅದನ್ನು ಅಳವಡಿಸುವಂತಹ ಎಲ್ಲಾ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

ಅಧ್ಯಕ್ಷರು : ಸಾಕು, ನಿಮ್ಮ ಸಲಹೆಯನ್ನು ಒಪ್ಪಿದ್ದಾರಲ್ಲ.

ಶ್ರೀ ಆರ್. ಜಗದೀಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ಬೇರೆ ಏನೂ ಸೇರಿಸುತ್ತಿಲ್ಲ. ಅದರ ಜೊತೆಯಲ್ಲಿ auction ಇರುವಂತಹ ಸಂದರ್ಭದಲ್ಲಿ ಈ Contractor ಗಳನ್ನು Control ಮಾಡುವುದಕ್ಕೆ ಈ Excise DC ಕೈಯಲ್ಲಿ ಆಗುವುದಿಲ್ಲವೆನ್ನುವ ಒಂದೇ ಕಾರಣಕ್ಕೆ excise CL 2, CL - 7 license ಕೊಡುವಂತಹ ಅಧಿಕಾರವನ್ನು ನಾವು Revenue DC ಯವರಿಗೆ ಕೊಟ್ಟೆವು. ಆದರೆ ಈಗ ಆ ತೊಂದರೆ ಇಲ್ಲ. ಎಲ್ಲಾ ಅಬಕಾರಿ ಇಲಾಖೆಯ Control ನಲ್ಲಿರುವಂತಹ licensees ಇರುತ್ತಾರೆ. ಯಾರೂ ದೊಡ್ಡ ಪಟ್ಟಭದ್ರ ಹಿತಾಸಕ್ತಿಗಳು ಇರುವುದಿಲ್ಲ. ಅದಕ್ಕಾಗಿ ಒಂದು ಸಲಹೆ ಏನೆಂದರೆ, ಈ ಸಾರಿ amend ಮಾಡುವಂತಹ ಸಂದರ್ಭದಲ್ಲಿ ಬಜೆಟ್‌ನಲ್ಲಿ ಒಂದು ಅಬಕಾರಿ ಲೈಸೆನ್ಸ್ ಅನ್ನು ನವೀಕರಣ ಮಾಡಿ ಮಾಡುವಂತಹ ಅಧಿಕಾರವನ್ನು Revenue DC ಯಿಂದ ತೆಗೆದು ದಯವಿಟ್ಟು Excise DC ಗೆ ಕೊಡಬೇಕೆಂದು ನನ್ನ ಮನವಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :– ಮಾನ್ಯ ಅಧ್ಯಕ್ಷರೆ, ಬೊಕ್ಕಸಕ್ಕೆ ಹೆಚ್ಚು ತೆರಿಗೆ ಹಣ ಬರಬೇಕಾದರೆ, ಇವತ್ತು ಹಳ್ಳಿ ಹಳ್ಳಿಗಳಲ್ಲಿ ಪೆಟ್ಟಿಗೆ ಅಂಗಡಿಗಳಲ್ಲಿ

ಸೆಕೆಂಡ್ಸ್ ಮಾರಾತಕ್ಕಂಥ ಪರಿಸ್ಥಿತಿ ಇದೆ, ಅದನ್ನು ನಿಯಂತ್ರಣ ಮಾಡಬೇಕು. ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಎಲ್ಲಾ ಹಳ್ಳಿಗಳಲ್ಲಿ drinks ಅನ್ನು ಅಂಗಡಿಗಳಲ್ಲಿ ಮಾರಾಟ ಮಾಡುತ್ತಾರೆ, ಅದಕ್ಕೆ ವಿಶೇಷ ಕಾನೂನು ತರಬೇಕು. ಪೊಲೀಸ್‌ನವರು ಮತ್ತು excise ನವರು, ಅವರ ಹತ್ತಿರ ದುಡ್ಡು ತೆಗೆದುಕೊಂಡು ಆ ಕೆಲಸ ಮಾಡುವುದಕ್ಕೆ ಅವರನ್ನು ಆರಾಮಾಗಿ ಬಿಟ್ಟಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೂ ನಷ್ಟ ಕೆಟ್ಟ drinks ಮಾರುವುದರ ಮೂಲಕ ಜನ ಕೂಡ ಹಾಳಾಗುತ್ತಾರೆ. ಅದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ :ಮಾನ್ಯ ಅಧ್ಯಕ್ಷರೆ, revenue misuse ಆಗುತ್ತದೆಂದು ಹೇಳಿ ಬಿಲ್ ತಂದಿದ್ದೀರಿ, ತನ್ನಿ, ಪಾಪ, ನೀವು ಸರ್ಕಾರದ ಪರವಾಗಿ ಲೆಕ್ಕ ನೋಡುವುದು ನಿಮ್ಮ ಕರ್ತವ್ಯ. ಆದರೆ ಆ ಲೆಕ್ಕ ನೋಡುವುದರ ಜೊತೆಗೆ ಆ ಲೆಕ್ಕ ಕಟ್ಟುತ್ತಾನಲ್ಲ, ಅವನು ಏನಾಗಿದ್ದಾನೆಂದು ಸರ್ಕಾರದವರು ಏನಾದರೂ ಯೋಚನೆ ಮಾಡಿದ್ದೀರಿ? ನೀವು ಅದಕ್ಕೆ ಕಾನೂನು ತರುತ್ತಿಲ್ಲ. ಇವತ್ತು ಹಳ್ಳಿ ಹಳ್ಳಿಗಳಲ್ಲಿ ಪೆಟ್ಟಿಗೆ ಅಂಗಡಿಗಳಲ್ಲಿ ರೈಲ್ವೆ ಸ್ಟೇಷನ್‌ನಲ್ಲಿ ಬಸ್‌ಸ್ಟಾಂಡ್‌ನಲ್ಲಿ ಬ್ರ್ಯಾಂದಿಯನ್ನು ನೀವೇ ಸರ್ಕಾರದವರು indirect ಆಗಿ ಮಾರಿ ಎಂದು ಹೇಳಿದಿರಿ, ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಏಕೆಂದರೆ ಅರಸೀಕೆರೆಯಲ್ಲಿ 30,073 ಕೇಸ್‌ಗಳನ್ನು ನೀನು ಮಾರಲೇಬೇಕು, ನೀನು ಮಾರದಿದ್ದರೆ ನಿನ್ನ ಸಂಬಳ ನಿಲ್ಲಿಸುತ್ತೇನೆಂದು Excise Commissioner ತಾಕೀತು ಮಾಡಿ ಕಳುಹಿಸುವುದಾದರೆ ಹೇಗೆ? ನೀವು ಕಡ ಕೊಡದೆ, ಹಳ್ಳಿಹಳ್ಳಿಯಲ್ಲಿ ತೆಗೆದುಕೊಂಡು ಹೋಗಿ ಮಾರದೆ, ಬೀದಿಯಲ್ಲಿ ಮಾರದೆ, ರೈಲ್ವೆ ಸ್ಟೇಷನ್‌ನಲ್ಲಿ ಮಾರದೇ original ಆಗಿ ಎಷ್ಟು ಮಾರಬಹುದು? ಅವನು 15 ರಿಂದ 16 ಸಾವಿರ ಕೇಸ್ ಮಾರುವುದರಲ್ಲಿ ಮುಗಿದು ಹೋಯಿತು ಎಂದು Excise Inspector ಹೇಳುತ್ತಾನೆ. ಆದರೆ ಅವನಿಗೆ ನೀವು 31 ಸಾವಿರ case target fix ಮಾಡಿ, ಆ ದುಡ್ಡು ತೆಗೆದುಕೊಳ್ಳುವುದಕ್ಕೆ ಎಲ್ಲಾದರೂ diversion ಅಥವಾ misuse ಆಗುತ್ತದೆಂದು ವಿದ್ಯುನ್ಮಾನ ಯಂತ್ರವನ್ನು ತೆಗೆದುಕೊಂಡು ಇಟ್ಟುಕೊಳ್ಳುತ್ತಿದ್ದೀರಿ. ಬಹಳ

ಸಂತೋಷ, ನೀವು ಪ್ರತಿದಿನ ದಾಖಲಾತಿ ತೆಗೆದುಕೊಳ್ಳಿ 13,000 ಕೋಟಿಯಿಂದ 17,000 ಕೋಟಿಗೆ ಹೋಗಿದ್ದೀರಿ. ಅನ್ನ ಭಾಗ್ಯವನ್ನು ಅದೇ ದುಡ್ಡಿನಲ್ಲಿ ಕೊಡಿ, ಕ್ಷೀರಭಾಗ್ಯವನ್ನು ಕೂಡ ಅದೇ ದುಡ್ಡಿನಲ್ಲಿ ಕೊಡಿ. ಎಲ್ಲಾ ಭಾಗ್ಯಗಳನ್ನು ಅದೇ ದುಡ್ಡಿನಲ್ಲಿ ಕೊಡಿ. ಅವರ ದುಡ್ಡನ್ನೇ ತೆಗೆದುಕೊಳ್ಳಿ, ಅವರಿಗೆ ಕೊಡಿ, ನಾವೇನು ಬೇಡವೆಂದು ಹೇಳುವುದಿಲ್ಲ. ಯಾರೂ ಮಾಡಿದರೂ ಕೂಡ ಇದನ್ನೇ ಮಾಡುತ್ತಿದ್ದುದ್ದು. ಆದರೆ ನೀವು ಹೆಚ್ಚಿಗೆ ಮಾಡಿದ್ದೀರಿ Excise ನಿಂದಲೇ ಇವತ್ತು ನಿಮ್ಮ ಸರ್ಕಾರ ನಡೆಯುತ್ತಿದೆ. ಒಂದು ವಿಚಾರ ಹೇಳಬೇಕೆಂದರೆ excise revenue ದಿಂದ ನೀವೇನು ಜನರಿಗೆ ಭಾಗ್ಯಗಳನ್ನು ಕೊಡುತ್ತಿದ್ದೀರಿ, ಈ ಎಲ್ಲಾ ಭಾಗಗಳು excise ನಿಂದಲೇ ತುಂಬಿ ತುಳುಕುತ್ತಿದ್ದಾರೆ. cheap liquor ಕುಡಿಯುವವರು ಯಾರು? ಕುಡಿಯುವವರೆಲ್ಲ ಅಹಿಂದಗಳೇ. ಅವರೇ ಕುಡಿದು ಅವರು ಕೊಟ್ಟಿರುವಂತಹ ದುಡ್ಡಿನಲ್ಲೇ ನೀವು ಇವುಗಳಲ್ಲಿವನ್ನು ಮಾಡುತ್ತಿದ್ದೀರಿ. ಮಾನ್ಯ ಸಚಿವರೆ, ಏನಾದರೂ ಮಾಡಿ ಬೀದಿ ಬೀದಿಯಲ್ಲಿ ಮಾರದಿರುವುದಕ್ಕೆ ಒಂದು ಅನ್ನು ತೆಗೆದುಕೊಂಡು ಬನ್ನಿ. ನೀವು target fix ಮಾಡುವುದನ್ನು ನಿಲ್ಲಿಸಿ. ದಯವಿಟ್ಟು ಅದಕ್ಕೊಂದು amendment ತೆಗೆದುಕೊಂಡು ಬನ್ನಿ ..

ಅಧ್ಯಕ್ಷರು:– ನೋಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ,

ಶ್ರೀ ಟಿ.ಬಿ.ಜಯಚಂದ್ರ: Exchequer ಗೆ Immediate ಆಗಿ ಹಣ ಬರುವಂತಹ ನಿಟ್ಟಿನಲ್ಲಿ ಅಥವಾ ಅದನ್ನು ಸುಧಾರಣೆ ಮಾಡುವಂತಹ ಪ್ರಕ್ರಿಯೆ ಕೂಡ ಈ ದಿಸೆಯಲ್ಲಿ ಪ್ರಾರಂಭವಾಗುತ್ತದೆ. ಮಾನ್ಯ ಸದಸ್ಯರು ಆನೇಕ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಲಹೆಗಳನ್ನು ಪಾಲಿಸುವಂತಹ ಕೆಲಸವನ್ನು ಮಾಡುತ್ತೇವೆನ್ನುವ ಮಾತನ್ನು ಹೇಳಿದ್ದೇವೆ. ಆದುದರಿಂದ, ದಯಮಾಡಿ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. 2014ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ)

ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪಸ್ತಾಪದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು ಪ್ರಸ್ತಾವದ ವಿರೋಧ ವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು:–ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ,

2ನೇ ಖಂಡವು ವಿಧೇಯಕದ ಅಂಗವಾಗಿರಬೇಕೆನ್ನುವುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.

2ನೇ ಖಂಡ ವಿಧೇಯಕದ ಅಂಗವಾಯಿತು

(ಪಸ್ತಾಪ ಅಂಗೀಕರಿಸಲ್ಪಟ್ಟಿತು)

ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು:– ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಿರಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಸಲಾಯಿತು)

ಅಧ್ಯಕ್ಷರು: ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬೇಕು

ಶ್ರೀ ಟಿ.ಬಿ.ಜಯಚಂದ್ರ(ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು) (ಶ್ರೀ ಸತೀಶ ಜಾರಕಿಹೋಳಿ, ಅಬಕಾರಿ ಸಚಿವರು ಪರವಾಗಿ): ಮಾನ್ಯ ಅಧ್ಯಕ್ಷರೆ, 2014ನೇ ಕರ್ನಾಟಕ ಅಬಕಾರಿ (ತಿದ್ದುಪಡಿ)ವಿಧೇಯಕ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ,

2014 ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು,

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

ಪ್ರಸ್ತಾವ "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ.

ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು)

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ. ಶ್ರೀಮಾನ್ ರೇವಣ್ಣನವರೆ, ತಾವು ಸಂಕ್ಷಿಪ್ತವಾಗಿ ಹೇಳಿ, ಭಾಷಣ ಮಾಡಬೇಡಿ.

ಗಮನ ಸೆಳೆಯುವ ಸೂಚನೆಗಳು

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಹೊಳೇನರಸೀಪುರ ತಾಲ್ಲೂಕು, ಸುಣ್ಣಕಲ್ಲು ಗ್ರಾಮದಲ್ಲಿ ಸರ್ವೆ ನಂಬರ್ 8/PI ಇವುಗಳಲ್ಲಿ 16 ಎಕರೆ 20 ಗಂಟೆ Village Accountant ಸ್ವಂತ ತಾಯಿಯ ಹೆಸರಿನಲ್ಲಿ ..

ಅಧ್ಯಕ್ಷರು :– ನೀವು ಮೊದಲು ಗಮನ ಸೆಳೆಯಿರಿ, ಸುಮ್ಮನೆ ಭಾಷಣ ಮಾಡಬಾರದು.

ಶ್ರೀ ಹೆಚ್.ಡಿ. ರೇವಣ್ಣ : ಬೇನಾಮಿ ಹೆಸರಿನಲ್ಲಿ ಮಾಡಿ ಸರ್ಕಾರಕ್ಕೆ ಒಂದೆರಡು ಕೋಟಿ ರೂಪಾಯಿ ಬರುವಂತಹ ಆಸ್ತಿಯನ್ನು ಕೇವಲ 30 ಲಕ್ಷ ರೂಪಾಯಿಗೆ ಬರೆಯಿಸಿದ್ದಾರೆ. ಅದು ಕಾನೂನುಬಾಹಿರವಾಗಿದೆ.

ಅಧ್ಯಕ್ಷರು : ರೇವಣ್ಣನವರೆ, ಯಾವಾಗಲೂ ಕೂಡ ಮೊದಲು ಸಚಿವರ ಗಮನ ಸೆಳೆಯಬೇಕು.